ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ     ದಿನಾಂಕ DATE 21/02/2020

ಸಂ.ಕ 21/2/2020

# ಸ್ಪೀಕರ್ ಜತೆ ರೆಡ್ಡಿ ಚಕಮಕಿ ಬೇಸರದಿಂದ ಸಭಾತ್ಯಾಗ

ವಿಧಾನಸಭೆ: ಮಾತಿಗೆ ಅವಕಾಶದ ವಿಚಾರವಾಗಿ ಮಾಜಿ ಸಚಿವ ರಾಮಲಿಂಗಾರೆಡ್ಡಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಜತೆಗೆ ಮಾತಿನ ಚಕಮಕಿ ನಡೆಸಿದ ಅಪರೂಪದ ಪ್ರಸಂಗಕ್ಕೆ ಸದನ ಸಾಕ್ಷಿಯಾಯಿತು.

ಶಾಸಕರ ಕ್ಷೇತ್ರಗಳಿಗೆ ಅನುದಾನದ ಕಡಿತದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ತಮಗೆ ಮಾತಿಗೆ ಅವಕಾಶ ನೀಡಬೇಕು ಎಂದು ರಾಮಲಿಂಗಾರೆಡ್ಡಿ ಪದೇ ಪದೇ ಎದ್ದು ನಿಂತರು. ಆಗ ಮಾತನಾಡಿದ ಸ್ಪೀಕರ್, ನಿಮಗೆ ಆಮೇಲೆ ಅವಕಾಶ ನೀಡುತ್ತೇನೆ. ನಾನು ಹೇಳಿದ್ದನ್ನು ನೀವು ಗಂಭೀರವಾಗಿ ಪರಿಗಣಿಸಿ ಜಾರಿ ಮಾಡದಿದ್ದರೆ ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ಕಠಿಣ ನಿಲುವು ತೆಗೆದುಕೊಳ್ಳುವುದು ಅನಿವಾರ್ಯ ಆಗುತ್ತದೆ ಎಂದು ಎಚ್ಚರಿಸಿದರು. ಇದರಿಂದ ಕೆರಳಿದ ರೆಡ್ಡಿ ನೀವು ನನಗೆ ಡಿಕ್ಟೇಟ್ ಮಾಡಬೇಡಿ. ನಾವೇನೂ ಶಾಲಾ ಮಕ್ಕಳಲ್ಲ. ನಿಮ್ಮ ಮನಸ್ಸಿಗೆ ಬಂದಂತೆ ಸದನ ನಡೆಸಲು ಆಗೋಲ್ಲ ಎಂದರು. ಆಗ ಸ್ಪೀಕರ್ ನೀವು ಹಿರಿಯರು ಇದೇನು ಹೀಗೆ ಮಾತಾಡ್ತ ಇದೀರಿ ಎಂದು ಪ್ರಶ್ನಿಸಿದರು.

ನನಗೆ ಶಿಸ್ತು ಹೇಳಿಕೊಡೋದು ಬೇಡ. ಇದೆಲ್ಲಾ ಚೆನ್ನಾಗಿರೋಲ್ಲ ಎಂದು ರೆಡ್ಡಿ ಪ್ರತಿಕ್ರಿಯಿಸಿದರು. ಆಗ ಸ್ಪೀಕರ್ ಹೀಗೆ ಮುಂದುವರೆದರೆ ಕ್ರಮ ಅನಿವಾರ್ಯ ಎಂದು ಹೇಳಿದರು. ಏನ್ ಮಾಡ್ತೀರಿ ಹೇಳಿ ಎಂದು ರೆಡ್ಡಿ ಮತ್ತೆ ಕೆರಳಿ ಪ್ರಶ್ನಿಸಿದರು. ಆಗ ಮಧ್ಯಪ್ರವೇಶಿಸಿದ ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ನೀವೇನು ಸ್ಪೀಕರ್ ಗೆ ವಾರ್ನಿಂಗ್ ಮಾಡ್ತೀರಾ ಎಂದು ರೆಡ್ಡಿ ಅವರಿಗೆ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಆಡಳಿತ, ವಿಪಕ್ಷ ಶಾಸಕ ನಡುವೆ ವಾಗ್ವಾದ ಆಯಿತು. ತಮಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ ಎಂದು ಬೇಸರಗೊಂಡ ರಾಮಲಿಂಗಾರೆಡ್ಡಿ ಸದನದಿಂದ ಹೊರನಡೆದರು.



ವಿಪಕ್ಷ ಮುಖಂಡರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಉತ್ತರ ನೀಡುತ್ತಿದ್ದ ದೃಶ್ಯ

## ಈಗಲಾದರೂ ಕನ್ನಡ ಬರುತ್ತಾ?

ವಿಧಾನಸಭೆ: 'ಈಗಲಾದರೂ ಕನ್ನಡ ಮಾತನಾಡಲು ಬರುತ್ತದಾ?' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣರನ್ನು ಕೇಳಿ ಕೆಣಕಿದರು.

'ನಿಮಗೆ ಕನ್ನಡ ಬರೋದಿಲ್ಲ, ನೀವು ಮುಂಬಯಿಯಲ್ಲಿದ್ದವರು, ಈಗಲಾದರೂ ಮಾತನಾಡಲು ಬರುತ್ತದಾ? ಎಂದು ಕೇಳಿದರು. ಇದಕ್ಕೆ ಪ್ರಭು ಚವ್ಹಾಣ ಕುಪಿತಗೊಂಡರಾದರೂ ಅಷ್ಟೇ ವಿನೀತರಾಗಿ 'ನಾನು ಇಲ್ಲಿಯವನೇ, ಔರಾದ್‌ನವನು, ಬಿಜಿನೆಸ್‌ಗಾಗಿ ಮುಂಬೈಗೆ ಹೋಗಿದ್ದೆ ಅಷ್ಟೇ, ಔರಾದ್ ಕರ್ನಾಟಕದಲ್ಲೇ ಇದೆ' ಎಂದು ಮಾರುತ್ತರ ನೀಡಿದರು. ಆಗ ಸಿದ್ದರಾಮಯ್ಯ ಅವರು, 'ನಿಮ್ಮನ್ನು ನೋಯಿಸಬೇಕೆಂದು ಕೇಳುತ್ತಿಲ್ಲ, ಹಿಂದೆ ನಾನು ಬೀದರ್‌ಗೆ ಬಂದಿದ್ದಾಗ ಸಭೆಯಲ್ಲಿ ನಿಮ್ಮ ಭಾಷೆ ನನಗೆ ಅರ್ಥವಾಗಿರಲಿಲ್ಲ. ಮರಾಠಿ, ಬಂಜಾರಾ, ಹಿಂದಿ ಮಿಶ್ರಿತ ಕನ್ನಡ ಮಾತನಾಡಿದ್ದಿರಿ, ಹಾಗಾಗಿ ಈ ರೀತಿ ಕೇಳಿದೆ ಅಷ್ಟೇ' ಎಂದು ಹೇಳಿ ತಮ್ಮ ಮಾತು ಮುಂದುವರಿಸಿದರು.

5